ವಿಶ್ವವಾಣಿ
28.03.2024 ಗುರುವಾರ
vishwavani.news

# ಸಾಮಾಜಿಕ ತಾಣ ಪಯಣ

## ಆತ್ಮದೊಲವಿನಲಿ ರಾಧೆ

ಯಮುನೆಯ ದಿವ್ಯತಟದಲಿ
ವಿಹರಿಸಿರಲು ನಾ ಮೌನವಾಗಿ!
ಮನವಿಂದು ಕೂಗಿ ಕರೆದಿದೆ..
ಬರುವೆಯಾ ಬಾಳಲಿ ನೀ ಜೊತೆಯಾಗಿ!

ಯಾವ ಪ್ರೀತಿಯ ಕರೆಗೂ
ನಾ ಮನಸೋತು ಓಗೊಡಲಿಲ್ಲ!
ನನ್ನಾತ್ಮದ ಕದ ನಿ ಬಂದು..
ತೆರೆದಾಗ ನಾ ನಾನಾಗಿರಲಿಲ್ಲ!

ನೀ ನುಡಿಸುವ ವೇಣುನಾದದಿ
ನಿನ್ನ ಬಿಸಿಯುಸಿರಿನ ಗಾನವಾಗುವಾಸೆ
ನಿನ್ನ ಕಂಗಳ ಬೆಳದಿಂಗಳಲಿ..
ನಾ ಹೊಳೆವ ತಾರೆಯಾಗುವಾಸೆ!

ಆತ್ಮಪ್ರೇಮದ ಅಮರ ಭಾವವು
ನಿನ್ನಲಿಯೇ ಚಿಗುರಿ ಬೆಳೆಯಿತಲ್ಲಾ
ನೀ ನನ್ನ ಆತ್ಮಸಂಗಾತಿಯಾಗಿರಲು
ನಾ ಜಗವನೇ ಮರೆತೆನಲ್ಲಾ!

● ಸುಮನಾ ರಮಾನಂದ

## ಹೈಕುಗಳು

ಧರ್ಮಕ್ಕಂಟಿದೆ
ರಕ್ತದಮಲು, ಸ್ವಾರ್ಥ
ಪಾಲಕರಿಂದ

★

ರಕ್ತನಿಧಿಯ
ಸಾಲಿನ ಗ್ರಾಹಕರು
ಧರ್ಮಾತೀತರು

★

ಕೋಮುಸಂಘರ್ಷ
ಜಾಗೆಯಲಿ ಎದ್ದಿದೆ
ಅನಾಥಾಲಯ

★

ಕೋಟೆ ಕೊತ್ತಲ
ಕಟ್ಟಿಸಿ ಮೆರೆದರೂ
3-6 ನಿಶ್ಚಿತ

★

ಅಜಾನ್ ಜೊತೆ
ಸುಪ್ರಭಾತವು ಸೇರಿ
ಅನುಸಂಧಾನ

★

ತ್ರಿಕಾಲ ಜ್ಞಾನಿ
ವಿಫಲ, ಅರಿಯದೇ
ಮನದಿಂಗಿತ

★

ಎಲ್ಲ ಧರ್ಮವ
ಅಪ್ಪುವ ಚೇತನವೇ
ವಿಶ್ವಮಾನವ

★

ಖಾಕಿಗೆ ರಕ್ತ
ಕಾವಿಗೆ ವೀರ್ಯ ಕಲೆ
ಶಾಂತಿ ಅದೆಲ್ಲಿ?

★

ಮತೀಯ ಭಾವ
ಕೆರಳಿಸುವ ಪಂಥ
ಚಿರಾಯು ಅಲ್ಲ

★

ಹೆಣೆಯುತ್ತಿದೆ
ಜಾತಿ ಕುಟಿಲತಂತ್ರ
ಮರ್ಧಿಸಿ ದ್ವೇಷ


● ಡಾ.ಸಮೀರ ಹಾದಿಮನಿ

## ಫೇಸ್‌ಬುಕ್ ಪಂಚ್

● ಅಂಬಿಕಾ ಗೌಡ

ಯಾರಾದ್ರು ನಿಮ್ಮ ಮೆಸೇಜ್‌ನ ಇಗ್ನೋರ್ ಮಾಡ್ತಿದ್ರೆ,
ನೋಡಿಯೂ ಸುಮ್ನಿದ್ರೆ ಕೊನೇದಾಗಿ,
ನಿಮ್ ಬಗ್ಗೆ ಏನೋ ಒಂದ್ ವಿಷಯ ಕೇಳ್ಪಟ್ಟೆ,
ಖುಷಿಯಾಯ್ತು ಅಂತ ಒಂದ್ ಮೆಸೇಜ್ ಹಾಕಿ ಸುಮ್ನಾಗಿ.
ಆಮೇಲೆ ಬರುತ್ತೆ ನೋಡಿ ಪಟಕ್ ಅಂತ ರಿಪ್ಲೈ.
ತಲೆ ಕೆಡಿಸ್ಕೊಂಡ್ ಸಾಯ್ಲಿ.
ಮತ್ತೆ ಅವರ ಜತೆ ಮಾತಿಗೇ ಇಳಿಬೇಡಿ.

## ಕಾರ್ಟೂನ್





ಮತದಾರರಿಗೆ ಆತ ಏನನ್ನು ಹಂಚುತ್ತಾರೆ ಅನ್ನೋ ಕುತೂಹಲ ಕಣ್ರೀ ನನಗೆ ..!!!

● ಎಚ್.ಎಸ್. ವಿಶ್ವನಾಥ್

## ಬೀಚಿ ಮಾತು

ಹಸಿದ ಹೊಟ್ಟೆಗೆ, ಉಕ್ಕುವ ಪ್ರಾಯಕ್ಕೆ, ಇರುವಷ್ಟು ಕಿವುಡು ಯಾವ ಕಲ್ಲಿಗೂ ಇಲ್ಲ..

## ತಲೇತಿಮ್ಮ






ಪ್ರಖರ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಒಜಸ್ವಿ

## ಪೋಸ್ಟಾಫೀಸಿನ ಮೊದಲ ಅನುಭವ

● ವಿ. ಎಸ್. ಕಳಸೇಶ್ವರ, ಬೆಂಗಳೂರು.

ನಮ್ಮ ಬಾಲ್ಯದಲ್ಲಿ ನಮ್ಮೂರಿನಲ್ಲಿ ದೊಡ್ಡ ಸರ್ಕಾರಿ ಕಛೇರಿಯೆಂದರೆ ಪೋಸ್ಟಾಫೀಸು. ಸ್ಕೂಲ್ ಮಾಸ್ಟರ್ ಬಿಟ್ಟರೆ ನಾವು ಕಂಡಿದ್ದು ಪೋಸ್ಟ್ ಮಾಸ್ಟರ್ ಮಾತ್ರ. ಪೋಸ್ಟ್ ಕಾರ್ಡ್, ಇನ್‌ಲ್ಯಾಂಡ್ ಲೆಟರ್, ಕವರ್ ಇತ್ಯಾದಿಗಳನ್ನು ಅಪರೂಪಕ್ಕೆ ನೋಡುತ್ತಿದ್ದೆವು. ಆದರೆ ಅದು ಹೇಗೆ ಹೋಗುತ್ತದೆ, ನಮ್ಮನ್ನು ತಲುಪುತ್ತದೆ ಎಂಬುದು ನನಗೆ ಗೊತ್ತಿರಲಿಲ್ಲ. ನಾನು ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ಹೆಡ್ ಮೇಷ್ಟ್ರು ಯಾವಾಗಾದರೊಮ್ಮೆ ನನ್ನನ್ನು ಪೋಸ್ಟ್ ಆಫೀಸಿಗೆ ಸ್ಟಾಂಪು, ಕಾರ್ಡು, ಇನ್‌ಲ್ಯಾಂಡ್ ಲೆಟರ್' ಇತ್ಯಾದಿ ತರುವುದಕ್ಕೋ, ರಿಜಿಸ್ಟರ್ ಪೋಸ್ಟ್ ಮಾಡುವುದಕ್ಕೋ, ಸೂಚನೆ ಕೊಟ್ಟು ದುಡ್ಡನ್ನೂ ಕೊಟ್ಟು ಕಳಿಸುತ್ತಿದ್ದರು. ನಮ್ಮ ಶಾಲೆಯಿಂದ, ಅರ್ಧ ಕಿ.ಮೀ ದೂರದಲ್ಲಿದ್ದ ಪೋಸ್ಟ್ ಆಫೀಸಿಗೆ ನಡೆದುಕೊಂಡು ಹೋಗಿ ವಹಿಸಿದ್ದ ಕೆಲಸ ನೆನಪಿಟ್ಟುಕೊಂಡು, ಕೊಟ್ಟಿದ್ದ ದುಡ್ಡನ್ನು ಜೋಪಾನವಾಗಿಟ್ಟುಕೊಂಡು ಕೆಲಸ ಮುಗಿಸಿಕೊಂಡು ಬರುತ್ತಿದ್ದೆ.

ಒಮ್ಮೆ ನಮ್ಮ ಮೇಷ್ಟ್ರು ನನ್ನ ಕರೆದು ಪೋಸ್ಟ್ ಕವರ್ ನನ್ನ ಕೈಗೆ ಕೊಟ್ಟು ಇದನ್ನು ಪೋಸ್ಟ್ ಮಾಡಿ ಬಾ ಎಂದರು. ಆದರೆ ನನಗೆ ಆದರೆ ಪೋಸ್ಟ್ ಮಾಡುವುದು ಎಂದರೇನು, ಹೇಗೆ ಎಂಬುದು ಗೊತ್ತಿರಲಿಲ್ಲ. ಮತ್ತೆ ಮೇಷ್ಟ್ರನ್ನೇ ಕೇಳಿ ತಿಳಿಯುವುದಕ್ಕೆ ಭಯ, ಸಂಕೋಚ. ಯಾವುದಕ್ಕೂ ಪೋಸ್ಟ್ ಆಫೀಸಿಗೆ ಹೋಗಿ ನೋಡೋಣ ಎಂದು ಯೋಚಿಸಿ ಹೊರಟೆ. ನಮ್ಮೂರಿನಲ್ಲಿ ಪೋಸ್ಟಾಫೀಸು ಇದ್ದುದು, ಮನೆಯಂತಹ ಕಟ್ಟಡದಲ್ಲಿ. ಅಲ್ಲಿ ಜಗುಲಿಯಿಂದ ಕಿಟಕಿಯಲ್ಲಿ ಇಣುಕಿದರೆ ಒಳಗೆ ಎರಡು ಮೂರು ಜನ ಕಾಣುತ್ತಿದ್ದರು. ಒಂದು ಮೂಲೆಯಲ್ಲಿ ಒಂದು ಸಣ್ಣ ಯಂತ್ರದಿಂದ ಆಗಾಗ ಟಕಟಕಾ, ಟಕ್ ಟಕಾ ಎಂಬ ಶಬ್ದ ಬರುತ್ತಿರುತ್ತಿತ್ತು.

ನಾನು ಇತರ ಸಂದರ್ಭಗಳಂತೆಯೇ ಮೇಷ್ಟ್ರು ಕೊಟ್ಟಿದ್ದ ಕಾಗದವನ್ನು ಕಿಟಕಿಯ ಹಿಂದೆ ಕುಳಿತವರಲ್ಲಿ ಕೊಟ್ಟು ಇದನ್ನು ಪೋಸ್ಟ್ ಮಾಡಬೇಕಂತೆ ಎಂದು ಹೇಳಿ ಕೊಟ್ಟೆ. ಅವರು ಅದನ್ನು ಪಕ್ಕದಲ್ಲೇ ಇರುವ ಪೋಸ್ಟ್ ಡಬ್ಬಿಗೆ ಹಾಕಿ ಎಂದು ಹೇಳಿ ನನಗೇ ಹಿಂತಿರುಗಿಸಿದರು. ಅದರೆ ಅದುವರೆಗೂ ನಾನು ಪೋಸ್ಟ್ ಡಬ್ಬಿ ಒಳಕ್ಕೆ ಕಾಗದ ಹಾಕಿರಲಿಲ್ಲ. ಅಲ್ಲಿ ಎಲ್ಲೂ ಕೆಂಪು ಬಣ್ಣದ ಡಬ್ಬಿಯೂ ಇರಲಿಲ್ಲ. ಬದಲಾಗಿ ಆ ಪೋಸ್ಟಾಫೀಸಿನಲ್ಲಿ ಕಿಟಕಿಯ ಪಕ್ಕದ ಗೋಡೆಯಲ್ಲೇ ಕಾಗದಗಳು ತೂರುವಷ್ಟು ಅಗಲದ ರಂಧ್ರ ಮಾಡಿ ಅದರಲ್ಲಿ ಹಾಕುವ ಕಾಗದಗಳು ಒಳಗಿರುವ ಡಬ್ಬಿಯೊಳಗೆ ಬೀಳುವ ವ್ಯವಸ್ಥೆ ಮಾಡಿದ್ದರು. ಆದರೆ ಆಗ ನನಗೆ ಅದೆಲ್ಲ ಹೊಸದು. ಏನು ಮಾಡಬೇಕೆಂದು ತೋಚದೆ



ಕ್ಷಣಕಾಲ ನಿಂತಿದ್ದೆ. ಯಾರೋ ಬಂದವರು ಕಿಟಕಿಯ ಪಕ್ಕದ ಕಿಂಡಿಗೆ ಪತ್ರ ಹಾಕಿದ್ದನ್ನು ನೋಡಿ ಆ ಕಿಂಡಿಯ ಮೇಲೆ ಪತ್ರಗಳು ಎಂದು ಬರೆದಿದ್ದನ್ನು ನೋಡಿ ನಾನೂ ಧೈರ್ಯ ಮಾಡಿ ಅದರೊಳಗೆ ಪತ್ರ ಹಾಕಿದೆ. ಅದು ಒಂದಷ್ಟು ದೂರ ಜಾರಿಕೊಂಡು ಹೋಗಿ ಬಿದ್ದ ಶಬ್ದ ಕೇಳಿಸಿತು. ಹಿಂತಿರುಗಿ ಹೊರಟ ಮೇಲೆ ನನ್ನನ್ನು ಒಂದು ಅನುಮಾನ ಕಾಡಿತು. ನಾನು ರಂಧ್ರದೊಳಗೆ ಪತ್ರ ಹಾಕುವಾಗ ವಿಳಾಸ ಮೇಲ್ಭಾಗದಲ್ಲಿರುವಂತೆ ಹಾಕಿದ್ದೇನೆಯೇ ಅಥವಾ ಕೆಳಮುಖವಾಗಿ ಹಾಕಿದ್ದೇನೆಯೇ? ಯಾವುದು ಸರಿಯಾದ ವಿಧಾನ? ಒಂದು ವೇಳೆ ಪತ್ರ ತಲುಪದಿದ್ದರೆ? ಎಂಬಿತ್ಯಾದಿ ಚಿಂತೆ ಹತ್ತಿತು. ಅದರ ಬಗ್ಗೆ ಮೇಷ್ಟ್ರು ಏನೂ ಕೇಳದಿದ್ದುದರಿಂದ ಸದ್ಯಕ್ಕೆ ಬಚಾವಾದಂತೆನಿಸಿತ್ತು.

ಅಂಚೆ ಕಛೇರಿಯ ಮೊದಲ ಅನುಭವದ ಈ ಅನುಮಾನ ಮುಂದೆ ಮೂರನೆ ತರಗತಿಯಲ್ಲಿ ಅಂಚೆಯ ಅಣ್ಣ ಪದ್ಯ, ಹಾಗೂ ಟಪ್ಪಾಲು ವ್ಯವಸ್ಥೆಯ ಕುರಿತ ಪಾಠ ಓದಿದ ಮೇಲೆ ಪರಿಹಾರವಾಯಿತು.

## ನೋಡುವ ದೃಷ್ಟಿ



● ಮೇಲುಕೋಟೆ.ಎಸ್.ಗೌಡ

ಒಬ್ಬ ಸಂತ ಗುಡಿಸಲಿನಲ್ಲಿ ವಾಸವಾಗಿದ್ದ. ಆತ ದಿನನಿತ್ಯ ಸಂಜೆಯ ವೇಳೆ ಗುಡಿಸಲಿನ ಮುಂದೆ ಕುಳಿತುಕೊಂಡು ಭಜನೆ ಮಾಡುತ್ತಿದ್ದ. ತನ್ನ ಸಂತೋಷಕ್ಕಾಗಿ ಭಜನೆ ಮಾಡುತ್ತಿದ್ದ, ಅದ್ಭುತವಾಗಿ ಹಾಡುತ್ತಿದ್ದ. ಅವನ ಪಾಡಿಗೆ ಅವನು ಹಾಡುತ್ತಿದ್ದರೆ ಅದನ್ನು ಕೇಳಲು ನೂರಾರುಜನ ಬಂದು ಸೇರುತ್ತಿದ್ದರು. ಏಕೆಂದರೆ ಹಾಡುತ್ತಿದ್ದ ಹಾಡಿನೊಳಗಿರುವ ಭಾವ ಬಹಳ ಅದ್ಭುತವಾಗಿತ್ತು. ಆದ್ದರಿಂದ ಭಜನೆಯ ಸಮಯದಲ್ಲಿ ಪ್ರತಿದಿನ ಹೆಚ್ಚು ಹೆಚ್ಚು ಜನ ಸೇರುತ್ತಿದ್ದರು. ಭಜನೆ ಮುಗಿದ ಮೇಲೆ ಸಂತನನ್ನು ಹೆಚ್ಚು ಹೆಚ್ಚು ಗೌರವಿಸತೊಡಗಿದರು.


ಅದೇ ಊರಿನಲ್ಲಿ ಒಬ್ಬ ಬಹು ದೊಡ್ಡ ವಿದ್ವಾಂಸ ಇದ್ದ. ಪ್ರತಿದಿನ ಸಂತನ ಗುಡಿಸಲಿನ ಮುಂದೆ ಸೇರುತ್ತಿದ್ದ ಜನರನ್ನು, ನೀಡುತ್ತಿದ್ದ ಗೌರವವನ್ನು ಕಂಡು ಆತನಿಗೆ ಅಸೂಯೆಯಾಯಿತು. ದೊಡ್ಡ ವಿದ್ವಾಂಸ. ಆದರೆ ಅವನ ಜ್ಞಾನ ಅವನಿಗೇ ಉಪಯೋಗಕ್ಕೆ ಬರುತ್ತಿರಲಿಲ್ಲ. ಯಾವುದೇ ಕಾರಣಲ್ಲದೆ ಸಂತನ ಬಗ್ಗೆ ಆತನಿಗೆ ತಿರಸ್ಕಾರ ಭಾವನೆ ಮೂಡತೊಡಗಿತ್ತು. ಈ ಬಗ್ಗೆ ಗೊತ್ತಿಲ್ಲದ ಸಂತ ತನ್ನ ಪಾಡಿಗೆ ತಾನು ಹಾಡುತ್ತಿದ್ದ. ಪಾಪ, ಸಂತ ವಿದ್ವಾಂಸನಿಗೆ ಏನನ್ನೂ ಮಾಡಿಲ್ಲ. ಆತ ಯಾರೆಂದೂ ಗೊತ್ತಿಲ್ಲ. ಆತನ ಭೇಟಿಯನ್ನೂ ಮಾಡಿಲ್ಲ. ಆದರೆ ಸಂತನ ಬಗ್ಗೆ ವಿದ್ವಾಂಸನ ಅಂತರಂಗದಲ್ಲಿ ದ್ವೇಷ ಭಾವನೆ ಬೆಳೆಯುತ್ತಿತ್ತು. ಹೀಗೆ ಆದರೆ ಜನರೆಲ್ಲ ಆತನಲ್ಲಿಗೇ ಹೋಗುತ್ತಾರೆ. ನನ್ನನ್ನು ಯಾರೂ ಗಮನಿಸುವುದಿಲ್ಲ. ಹಾಗಾಗಿ ಏನಾದರೂ ಮಾಡಿ ಆ ಸಂತನನ್ನು ಊರು ಬಿಡಿಸಬೇಕೆಂದು ಯೋಚಿಸಿ, ಸಂತನಿಗೆ ಅವಮಾನ ಮಾಡಿದರೆ ಆತ ಊರು ಬಿಡುತ್ತಾನೆ ಎಂದು ಕುತಂತ್ರವನ್ನು ರೂಪಿಸಿದ.

ಒಂದು ದಿನ ವಿದ್ವಾಂಸ ನಸುಕಿನಲ್ಲಿಯೇ ಎದ್ದು ಸಂತನ ಗುಡಿಸಲಿನ ಬಾಗಿಲಿಗೆ ಎರಡು ಹಳೆಯ ಚಪ್ಪಲಿಗಳನ್ನು ಕಟ್ಟಿದ. ಸಂತ ಎದ್ದು ಬಾಗಿಲನ್ನು ತೆಗೆದ. ತಕ್ಷಣವೇ ಆ ಚಪ್ಪಲಿಗಳು ಆತನ ತಲೆಗೆ ಬಡಿದವು. ಚಪ್ಪಲಿಗಳು ತನ್ನ ತಲೆಗೆ ಬಡಿದಾಕ್ಷಣ ಸುತ್ತಲೂ ನೋಡಿದ. ಮರೆಯಲ್ಲಿ ವಿದ್ವಾಂಸ ನಗುತ್ತ ನಿಂತಿದ್ದ.

ಸಂತನ ತಲೆಗೆ ಪಾದರಕ್ಷೆಗಳು ಬಡಿದಾಗ ಆ ಘಟನೆಯನ್ನು ಹೇಗೆ ಬೇಕಾದರೂ ಅರ್ಥೈಸಿಕೊಳ್ಳಬಹುದಿತ್ತು. ಇದರಿಂದ ತನಗೆ ಅವಮಾನ ಆಯಿತು ಎಂದುಕೊಂಡು ಊರು ಬಿಡಬಹುದಿತ್ತು. ಅಥವಾ ಇದನ್ನು ಯಾರು ಮಾಡಿದ್ದಾರೆ, ನೋಡಿಯೇ ಬಿಡೋಣ, ಅವರಿಗೆತಕ್ಕ ಶಿಕ್ಷೆ ಕೊಡಿಸೋಣ ಎನ್ನಬಹುದಿತ್ತು. ಆದರೆ ಸಂತನಿಗೆ ಅನಿಸಿದ್ದು- ಕೆಲವರು ಕರ್ಮ ಪಥವನ್ನು ಹಿಡಿದು ಸಾಗುತ್ತಾರೆ. ಕೆಲವರು ಜ್ಞಾನ ಮಾರ್ಗವನ್ನು ಹಿಡಿದು ಸಾಗುತ್ತಾರೆ. ನಾನು ಮಹಾತ್ಮರ ಈ ಪಾದರಕ್ಷೆಗಳನ್ನು ಹಿಡಿದು ನನ್ನಜೀವನವನ್ನು ಉದ್ಧಾರ ಮಾಡಿಕೊಳ್ಳುತ್ತೇನೆ ಎಂದು.

ಅಂದರೆ ಘಟನೆ ಯಾವುದೇ ಇರಲಿ. ನಾವು ನೋಡುವ ದೃಷ್ಟಿ ಒಳ್ಳೆಯದಿದ್ದರೆ, ಸಮಾಧಾನದಿಂದ ಇದ್ದರೆ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವುದಿಲ್ಲ.

# ವಿಟಾಕೀಸ್




## ಸಿಂಹಗುಹೆಯಲ್ಲಿ ಪ್ರೇಮಗಾನ

ಸಾಹಸ ಸಿಂಹ ವಿಷ್ಣುವರ್ಧನ್ ಅವರ ಅಪ್ಪಟ ಅಭಿಮಾನಿಗಳೇ ಸೇರಿ ನಿರ್ಮಿಸಿರುವ ಸಿಂಹ ಗುಹೆ ಚಿತ್ರದ ಹಾಡು ಬಿಡುಗಡೆಯಾಗಿದೆ. ನಟ ಅನಿರುದ್ಧ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಈ ಚಿತ್ರದ ನಾಯಕ, ವಿಷ್ಣು ಅಪ್ಪಾಜಿಯವರ ಅಪ್ಪಟ ಅಭಿಮಾನಿ, ಹಾಗಾಗಿ ಸಂತಸದಿಂದಲೇ ಕಾರ್ಯಕ್ರಮಕ್ಕೆ ಬಂದೇ. ಚಿತ್ರದ ಹಾಡು ಬಲು ಮಧುರವಾಗಿ ಮೂಡಿಬಂದಿದೆ. ಸುಂದರ ತಾಣದಲ್ಲಿ ಹಾಡನ್ನು ಚಿತ್ರೀಕರಿಸಿದ್ದು ಖುಷಿ ತಂದಿದೆ ಎಂದು ಅನಿರುದ್ಧ್ ಹೇಳಿದರು. ಹಿರಿಯ ಪತ್ರಕರ್ತ ಸದಾಶಿವ ಶೆಣೈ, ಎಸ್ ಜಿ ಆರ್ ಚಿತ್ರ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಚಿತ್ರದಲ್ಲಿ ಮೂರು ಹಾಡುಗಳಿದ್ದು, ಸದ್ಯ ಭೂಮಿ ತಿರುಗುವುದು ಎಂಬ ಹಾಡು ಬಿಡುಗಡೆಯಾಗಿದೆ. ಶಿವನಂಜೇ ಗೌಡ ಸಾಹಿತ್ಯ ರಚಿಸಿರುವ ನವಿರಾದ ಪ್ರೇಮಗೀತೆಗೆ ಸತೀಶ್ ಆರ್ಯನ್ ದನಿಯಾಗಿದ್ದು, ಸಂಗೀತ ಸಂಯೋಜಿಸಿದ್ದಾರೆ. ಹಾಡು ಕೇಳಲು ಹಿತವಾಗಿದೆ.

ಸಿಂಹಗುಹೆ ತಿರುವುಗಳಿವೆ ಎಚ್ಚರಿಕೆ ಎಂಬ



> ಹಳ್ಳಿಗಾಡಿನಲ್ಲಿ ಸಾಗುವ ಕಥನವಿದು. ನಾನು ಅಪ್ಪಟ ಹಳ್ಳಿಗಾಡಿನ ಹುಡುಗನಾಗಿ ನಟಿಸಿದ್ದೇನೆ. ನಾನು ದೂರದ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದೇನೆ. ಅಲ್ಲಿಂದ ಇಲ್ಲಿಗೆ ಬಂದು ಕಥೆಯ ನೇಟಿವಿಟಿಗೆ ತಕ್ಕಂತೆ ಹೊಂದಿಕೊಂಡು ಗ್ರಾಮೀಣ ಹುಡಗನಾಗಿ ನಟಿಸುವುದು ಒಂದಷ್ಟು ಚಾಲೆಂಜಿಂಗ್ ಆಗಿತ್ತು. ಚಿತ್ರತಂಡದ ಸಹಕಾರದಿಂದ ಅಂದುಕೊಂಡಂತೆ ನಟಿಸಲು ಸಾಧ್ಯವಾಯಿತು.
>
> - ರವಿ ಶಿರೂರು ನಟ

> ಸಿಂಹ ಗುಹೆ ಎನ್ನುವುದು ಒಂದು ಮನೆ, ಅದರಲ್ಲಿ ನಡೆಯುವ ನಿಗೂಢ ಘಟನೆಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ. ಇದು ಕಾಲ್ಪನಿಕ ಕಥೆಯ ಸಿನಿಮಾವಾಗಿದ್ದು, ಥ್ರಿಲ್ಲರ್, ಸಸ್ಪೆನ್ಸ್ ಜಾನರ್ ನಲ್ಲಿ ಸಾಗುತ್ತದೆ.
>
> - ಎಸ್ ಜಿ ಆರ್ ನಿರ್ದೇಶಕ

ಅಡಿಬರಹವಿದೆ. ಮರ್ಡರ್ ಮಿಸ್ಟ್ರಿಯ ಕಥೆ ಚಿತ್ರದಲ್ಲಿದ್ದು ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ನಲ್ಲಿ ಸಾಗುತ್ತದೆ. ರವಿ ಶಿರೂರು ನಾಯಕನಾಗಿ ನಟಿಸಿದ್ದು, ನಿವಿಷ್ಕಾ ಪಾಟೀಲ್ ಮತ್ತು ಅನುರಾಧಾ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ.

ಎ.ಸಿ.ಮಹೇಂದ್ರನ್ ಛಾಯಾಗ್ರಹಣ, ಸತೀಶ್ ಆರ್ಯನ್ ಸಂಗೀತ ನಿರ್ದೇಶನ, ಸಾಯಿ ರಮೇಶ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

## ಗೆಳೆತನದ ಮಹತ್ವ ಸಾರುವ ಪಾರ್ಟ್ನರ್



ಗೌತಮ್ ಗೌಡ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಪಾರ್ಟ್ನರ್ ಚಿತ್ರ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು, ತೆರೆಗೆ ಸಿದ್ಧವಾಗಿದೆ. ಸದ್ಯ ಚಿತ್ರದ ಟೀಸರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ಹಿರಿಯ ನಿರ್ದೇಶಕ ಸಾಯಿ ಪ್ರಕಾಶ್ ಚಿತ್ರದ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಪಾರ್ಟ್ನರ್ ಗೆಳೆಯ ಸುತ್ತ ಸಾಗುವ ಕಥೆಯಾಗಿದ್ದು, ಅದರ ಜತೆಗೆ ನವಿರಾದ ಪ್ರೇಮ ಕಥೆಯೂ ಬೆರೆತಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು ಎರಡು ಹಾಡುಗಳು ರಿಲೀಸ್ ಆಗಿವೆ, ಅದರಲ್ಲಿಯೂ ಮೆಹಬೂಬ್‌ಸಾಬ್ ಹಾಡಿರುವ ಓ ಗೆಳೆಯಾ ಓ ಗೆಳೆಯ.. ಸೋಷಿಲ್ ಮೀಡಿಯಾದಲ್ಲಿ ಹೊಸ ಟ್ರೆಂಡ್ ಸೃಷ್ಟಿಸಿದೆ. ಆರ್. ಚೇತಸ್ ಮತ್ತು ಸತೀಶ್ ಕೃಷ್ಣಶೆಟ್ಟಿ ನಾಯಕರಾಗಿ ನಟಿಸಿದ್ದಾರೆ, ಕಿರುತೆರೆಯ ಅಗ್ನಿಸಾಕ್ಷಿ ಖ್ಯಾತಿಯ ಸುಕೃತಾನಾಗ್, ಪ್ರೀತಿ ಮಿರಾಜ್ಕರ್ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ.

> ಕೃಷ್ಣ, ಅರ್ಜುನರ ನಡುವಿನ ಸ್ನೇಹಸಂಬಂಧ ಹೇಗಿತ್ತು ಎಂಬುದನ್ನು ಚಿತ್ರದಲ್ಲಿ ತೋರಿಸಿದ್ದೇವೆ, ಸಿನಿಮಾ ನೋಡುತ್ತಿದ್ದರೆ, ಕಳೆದ ದಿನಗಳು ನಮ್ಮ ಕಣ್ಣಮುಂದೆ ಸಾಗುತ್ತವೆ. ಸ್ನೇಹಿತರ ನೆನಪು ಬಿಡದೆ ಕಾಡುತ್ತದೆ.
>
> -ಸತೀಶ್ ನಟ

> ಇಬ್ಬರು ಸ್ನೇಹಿತರ ನಡೆಯುವ ಕಥೆ ಇದಾಗಿದ್ದು, ಫ್ಯಾಮಿಲಿ ಎಮೋಷನ್ಸ್, ಲವ್ ಸ್ಟೋರಿ, ಮದರ್ ಸೆಂಟಿಮೆಂಟ್‌ನಂಥ ಎಲ್ಲಾ ಅಂಶಗಳು ಚಿತ್ರದಲ್ಲಿವೆ. ಇಂದಿನ ಯುವ ಸಮೂಹಕ್ಕೆ ಕನೆಕ್ಟ್ ಆಗುವ ಕಥೆ ಇಲ್ಲಿದೆ. ಕಂಪ್ಲೀಟ್ ಪ್ಯಾಕೇಜ್ ಚಿತ್ರ ಇದು ಎಂದು ಹೇಳಬಹುದು.
>
> -ಗೌತಮ್ ಗೌಡ ನಿರ್ದೇಶಕ

ಬಲರಾಜವಾಡಿ, ಶಿವರಾಜ್ ಕೆ.ಆರ್.ಪೇಟೆ, ರಾಬರ್ಟ್ ಲೂಯಿಸ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ನವಿಲು ವಾಯುಪುತ್ರ ಕಂಬೈನ್ಸ್ ಬ್ಯಾನರ್ ನಲ್ಲಿ ಆರ್.ನಾಗ ರಾಜ.ಆರ್. ಹಾಗೂ ಟಿ.ಕೆ. ರವಿ ಜಂಟಿ ಯಾಗಿ ಚಿತ್ರ ನಿರ್ಮಾಣ ಮಾಡಿ ದ್ದಾರೆ. ಚಿತ್ರದಲ್ಲಿ ಎಣ್ಣೆ ಸಾಂಗ್ ತುಂಬಾ ಚೆನ್ನಾಗಿ ಮೂಡಿ ಬಂದಿದ್ದು, ಜೆ.ಡಿ. ಹರೀಶ್, ಆನಂದ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಮುಂಜಾನೆ ಮಂಜು ಛಾಯಾಗ್ರಹಣ ಈ ಚಿತ್ರಕ್ಕಿದೆ.





## ರಿದಂ ಬಾರಿಸಿದ ಬ್ಯಾಡ್

ಪಿ.ಸಿ.ಶೇಖರ್ ನಿರ್ದೇಶನದ ಬ್ಯಾಡ್ ಹಾಡಿನ ಮೂಲಕವೇ ಮನಗೆಲ್ಲುತ್ತಿದೆ. ಬ್ಯಾಡ್ ಚಿತ್ರದ ಮಾತಿಗೂ ಮಾತಿಗೂ... ಹಾಡು ಬಿಡುಗಡೆಯಾಗಿದ್ದು ಈ ಮಧುರ ಗೀತೆ ಸಂಗೀತ ಪ್ರಿಯರ ಮನದಲ್ಲಿ ರಿದಂ ಬಾರಿಸುತ್ತಿದೆ. ಗೀತ ಸಾಹಿತಿ ಕವಿರಾಜ್ ರಚಿಸಿರುವ ಈ ಹಾಡಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಸರಿಗಮಪ ಖ್ಯಾತಿಯ ಪೃಥ್ವಿ ಭಟ್ ಹಾಗೂ ಸುನೀಲ್ ಗುಜಗೊಂಡ ಹಾಡಿಗೆ ದನಿಯಾಗಿದ್ದಾರೆ. ಈಗಾಗಲೇ ಟೀಸರ್ ಮೂಲಕ ಸದ್ದು ಮಾಡುತ್ತಿರುವ ಬ್ಯಾಡ್ ಈಗ ಹಾಡುಗಳ ಮೂಲಕವೂ ಜನಪ್ರಿಯವಾಗುತ್ತಿದೆ. ಚಿತ್ರೀಕರಣ ಮುಗಿಸಿರುವ ಬ್ಯಾಡ್ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳಲ್ಲಿ ಆರು ಜನ ಕಲಾವಿದರು ಅಭಿನಯಿಸಿರುವುದು ಈ ಚಿತ್ರದ ವಿಶೇಷ.

ಪ್ರೀತಿಯ ರಾಯಭಾರಿ ಚಿತ್ರದ ಮೂಲಕ ಜನರ ಮನಗೆದ್ದಿರುವ ನಕುಲ್ ಗೌಡ, ಬ್ಯಾಡ್ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದು, ಮಾನ್ವಿತಾ ಹರೀಶ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಾಯಿ ಕೃಷ್ಣ, ಅಪೂರ್ವಾ ಭಾರದ್ವಾಜ್, ಮಂಜುನಾಥ್ , ಅಶ್ವಿನಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿರುವ ಚಿತ್ರಕ್ಕೆ ನಿರ್ದೇಶಕ ಪಿ.ಸಿ.ಶೇಖರ್ ಅವರೆ ಸಂಕಲನ ಕಾರ್ಯ ನಿರ್ವಹಿಸಿದ್ದಾರೆ. ಶಕ್ತಿ ಶೇಖರ್ ಛಾಯಾಗ್ರಹಣವಿರುವ ಚಿತ್ರಕ್ಕೆ ಸಚಿನ್ ಜಡೇಶ್ವರ ಸಂಭಾಷಣೆ ಬರೆದಿದ್ದಾರೆ. ಆರ್ ವೆಂಕಟೇಶ್ ಗೌಡ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.